# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ

ಅಂಜನಾಪುರ ಉಪ ವಿಭಾಗ

2ನೇ ಮುಖ್ಯ ರಸ್ತೆ, 6ನೇ ಅಡ್ಡರಸ್ತೆ, ಆರ್.ಬಿ.ಐ ಲೇಔಟ್, ಕೊತ್ತನೂರು ಮುಖ್ಯರಸ್ತೆ, ಬೆಂಗಳೂರು-560078

ಸಂಖ್ಯೆ : ಸ.ಕಾ.ಅ/ಅ.ಉ.ವಿ/ಪಿ.ಆರ್/ ೧೯ /2021-22 ದಿನಾಂಕ : 03-04-2021

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ: ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ.ಬಿ(12)ಪಿಆರ್/35/2020-21 ದಿ:21.09.2020 ರವರ ಆದೇಶದಂತೆ ದಿ:03.04.2021 ರಂದು ವಾರ್ಡ್ ನಂ.196-ಅಂಜನಾಪುರ ಕೋವಿಡ್ ವಾರ್ ರೂಂ ಕಛೇರಿಯ ಉದ್ಯಾನವನದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

********

### ಸಭೆಗೆ ಹಾಜರಾಗಿದ್ದವರ ವಿವರಗಳು:-

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಹಾಜರಾತಿ |
|---|---|---|---|
| 1 | ಶ್ರೀ ಪ್ರಮೋದ್ ಕುಮಾರ್.ಎನ್.ಜಿ | ನೋಡಲ್ ಅಧಿಕಾರಿ | ಹಾಜರಿರುತ್ತಾರೆ. |
| 2 | ಶ್ರೀ ವಿ.ತಿಮ್ಮಯ್ಯ | ಸದಸ್ಯ ಕಾರ್ಯದರ್ಶಿ/ಸಹಾಯಕ ಅಭಿಯಂತರರು | ಹಾಜರಿರುತ್ತಾರೆ. |
| 3 | ಶ್ರೀ ನರೇಶ್.ಬಿ.ಎಸ್ | ಹಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿರುತ್ತಾರೆ. |
| 4 | ಶ್ರೀ ಯೋಗೇಶ್ | ಕಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿರುತ್ತಾರೆ. |
| 5 | ಶ್ರೀ ನವೀನ್ ಬಿ.ಸಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) | ಗೈರು ಹಾಜರಿರುತ್ತಾರೆ |
| 6 | ಬಿ.ಡಿ.ಎ ಅಧಿಕಾರಿಗಳು | ಸಹಾಯಕ ಇಂಜಿನಿಯರ್ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) | ಹಾಜರಿರುತ್ತಾರೆ. |
| 7 | ಶ್ರೀ ರಂಗಪ್ಪ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಗೈರು ಹಾಜರಿರುತ್ತಾರೆ. |
| 8 | ಶ್ರೀ ಸದಾನಂದ | ಕಂದಾಯ ಪರಿವೀಕ್ಷಕರು | ಗೈರು ಹಾಜರಿರುತ್ತಾರೆ. |
| 9 | ಶ್ರೀ ಶ್ರೀನಿವಾಸ್ | ಟ್ಯಾಕ್ಸ್ ಇನ್ಸ್‌ಪೆಕ್ಟರ್ | ಗೈರು ಹಾಜರಿರುತ್ತಾರೆ. |
| 10 | | ಪೋಲೀಸ್ ಇಲಾಖೆ | ಗೈರು ಹಾಜರಿರುತ್ತಾರೆ. |
| 11 | | ತೋಟಗಾರಿಕೆ ಅಧಿಕಾರಿಗಳು | ಗೈರು ಹಾಜರಿರುತ್ತಾರೆ. |
| 12 | ಶ್ರೀ ರಮೇಶ್ | ಬೀದಿ ದೀಪಗಳ ನಿರ್ವಹಣೆ | ಗೈರು ಹಾಜರಿರುತ್ತಾರೆ. |

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಂಜನಾಪುರ ವಾರ್ಡ್ ಸಂಖ್ಯೆ.196ರಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಪ್ರಮೋದ್ ಕುಮಾರ್.ಎನ್.ಜಿ ರವರು ದಿನಾಂಕ: 03-04-2021 ರಂದು ಶನಿವಾರ 11.00ಕ್ಕೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಸಮಿತಿಯ ಸದಸ್ಯರಿಗೆ ಶ್ರೀ ಕಾರ್ಯದರ್ಶಿ/ಸಹಾಯಕ ಅಭಿಯಂತರರು ಆದ ಶ್ರೀ ತಿಮ್ಮಯ್ಯ.ವಿ ರವರು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

-2-

Scanned with CamScanner

1. ಬೀದಿ ದೀಪಗಳ ನಿರ್ವಹಣೆ:-

ವಾರ್ಡ್ ವ್ಯಾಪ್ತಿಯಲ್ಲಿನ ಬೀದಿ ದೀಪಗಳ ನಿರ್ವಹಣೆಯಲ್ಲಿ ಸರಿಯಾಗಿ ನಿರ್ವಹಿಸುತ್ತಿದ್ದು ಸದರಿ ನಿರ್ವಹಣೆಯಲ್ಲಿ ಡಿ.ಪಿ ಸ್ವಿಚ್‌ಗಳು ಇಲ್ಲದೇ ನೇರವಾಗಿ ತಂತಿಗಳನ್ನು ಜೋಡಿಸುವ ಮೂಲಕ ಸಂಜೆ ವೇಳೆಯಲ್ಲಿ ಬೀದಿ ದೀಪಗಳನ್ನು ಹೊತ್ತಿಸಲಾಗುತ್ತಿದೆ. ಸದರಿ ಬೀದಿ ದೀಪಗಳಿಗೆ ಸಂಬಂಧಪಟ್ಟಂತೆ ಸಭೆಗೆ ಆಗಮಿಸಿದ ಅಧಿಕಾರಿಗಳ ಪ್ರತಿನಿಧಿಗಳು ಸದರಿ ಡಿ.ಪಿ ಸ್ವಿಚ್‌ಗಳು ದುಬಾರಿ ಆಗಿದ್ದು ವಾರ್ಡ್ ವ್ಯಾಪ್ತಿಯಲ್ಲಿ ಸುಮಾರು 30 ರಿಂದ 35 ಸ್ವಿಚ್‌ಗಳು ಬೇಕಾಗಿರುವುದರಿಂದ ಮೇಲಾಧಿಕಾರಿಗಳಲ್ಲಿ ಚರ್ಚಿಸಿ ದೂರಿನ ವಿಷಯವಾಗಿ ಬೀದಿ ದೀಪಗಳ ನಿರ್ವಹಣೆಯನ್ನು ವ್ಯವಸ್ಥಿತವಾಗಿ ಸರಿಪಡಿಸಲಾಗುತ್ತದೆ ಎಂದು ಈ ಹಿಂದಿನ ಸಭೆಯಲ್ಲಿ ತಿಳಿಸಿರುತ್ತಾರೆ. ಆದರೆ ಈ ದಿನ ಸಭೆಗೂ ಗೈರುಹಾಜರಾಗಿರುತ್ತಾರೆ.

2. ಬೆಸ್ಕಾಂ:-

ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ವಿತರಣೆಯಲ್ಲಿ ತೊಂದರೆಯಾಗುತ್ತಿದ್ದು, ಇದರ ಬಗ್ಗೆ ಸಭೆಯಲ್ಲಿ ಸದರಿ ಬೆಸ್ಕಾಂ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸಂಬಂಧಪಟ್ಟ ಅಧಿಕಾರಿಗಳು ಈ ದಿನದ ಸಭೆಗೂ ಕೂಡ ಗೈರುಹಾಜರಾಗಿರುತ್ತಾರೆ, ಇದರ ಬಗ್ಗೆ ಗಂಭೀರವಾಗಿ ಪರಿಗಣಿಸಿ ಸದರಿ ಸಮಸ್ಯೆಗಳ ಬಗ್ಗೆ ಮುಂದಿನ ಸಭೆಯಲ್ಲಿ ಸದರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮುಂದಿನ ಈ ಹಿಂದಿನ ಸಭೆಯಲ್ಲಿ ಹಾಜರಾಗುವಂತೆ ತಿಳಿಸಲಾಗಿತ್ತು. ಆದರೆ ಈ ದಿನ ಸಭೆಗೂ ಗೈರುಹಾಜರಾಗಿರುತ್ತಾರೆ.

**3. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ:-**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸಿರುವ ಬಡಾವಣೆಗಳಲ್ಲಿ ರಸ್ತೆ, ಒಳಚರಂಡಿ ಹಾಗೂ ಬೀದಿ ದೀಪಗಳ ನಿರ್ವಹಣೆ ಸರಿಯಾಗಿ ನಿರ್ವಹಿಸದೇ ಇರುವುದಾಗಿ ಮತ್ತು ಬೀದಿ ದೀಪಗಳ Fittings ಗಳು ಹಾಳಾಗಿದ್ದು, ಸದರಿ ಸ್ಥಳಗಳಲ್ಲಿ ಬೆಳಕಿನ ವ್ಯವಸ್ಥೆ ಇಲ್ಲದೇ ಇರುವುದು ಹಾಗೂ ಇದಕ್ಕೆ ಸಂಬಂಧಪಟ್ಟಂತೆ ಅಂದಾಜು ಪಟ್ಟಿಯನ್ನು ಮಂಜೂರಾತಿಗಾಗಿ ಸಲ್ಲಿಸಲಾಗಿರುತ್ತದೆ.

ಅಂಜನಾಪುರ ಕೆರೆ ಹೊರಬರುವ ಬೃಹತ್ ನೀರುಗಾಲುವೆಯನ್ನು ನಿರ್ಮಿಸಿಕೊಡಲು ಹಾಗೂ 1ನೇ ಮತ್ತು 2ನೇ ಹಂತ ಬಿ.ಡಿ.ಎ ಬಡಾವಣೆಯಿಂದ ಅಂಜನಾಪುರ ಮೆಟ್ರೋ ನಿಲ್ದಾಣದವರೆಗೆ ಅಪ್ರೋಚ್ ರಸ್ತೆ ಇಲ್ಲದೇ ಇರುವುದು ಸಭಿಕರೆ ಗಮನಕ್ಕೆ ಬಂದಿದ್ದು ಮತ್ತು ಅಲಹಳ್ಳಿ ಕೆರೆ ಹಿಂಭಾಗದಲ್ಲಿ ತಂತಿ ಬೇಲಿ ನಿರ್ಮಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಸಭೆಯಲ್ಲಿ ಹಾಜರಿದ್ದ ಸದಸ್ಯರು ಕೋರಿದ್ದು ಇದರ ಬಗ್ಗೆ ಮೇಲಾಧಿಕಾರಿಗಳಲ್ಲಿ ಚರ್ಚಿಸಿರುವುದಾಗಿ ಮತ್ತು ಅಂದಾಜು ಪಟ್ಟಿಗಳನ್ನು ಮೇಲಾಧಿಕಾರಿಗಳ ಅನುಮೋದನೆಗೆ ಸಲ್ಲಿಸಿರುವುದಾಗಿ ಶ್ರೀ ಕೃಷ್ಣ ನಾಯಕ್, ಸಹಾಯಕ ಅಭಿಯಂತರರು ಇವರು ಸಭೆಯಲ್ಲಿ ತಿಳಿಸಿರುತ್ತಾರೆ.

4. ಘನತ್ಯಾಜ್ಯ ನಿರ್ವಹಣೆ:-

ವಾರ್ಡ್ ವ್ಯಾಪ್ತಿಯಲ್ಲಿ ಅವಲಹಳ್ಳಿ ಬಿ.ಡಿ.ಎ ಫ್ಲಾಟ್ಸ್ ಪ್ರದೇಶದಲ್ಲಿ ಕಸದ ಸಂಗ್ರಹಣೆಯನ್ನು ಸರ್ಮಪಕವಾಗಿ ನಿರ್ವಹಿಸದೇ ಇರುವ ಹಾಗೂ ಅವಲಹಳ್ಳಿ ವ್ಯಾಪ್ತಿಯಲ್ಲಿ ಕಸದ ಸಮಸ್ಯೆಯನ್ನು ಸಮರ್ಪವಾಕಿ ನಿರ್ವಹಿಸದೇ ಇರುವುದು ಸಭೆಯ ಗಮನಕ್ಕೆ ತಂದಾಗ ಇದರ ಬಗ್ಗೆ ಕ್ರಮ ಕೈಗೊಂಡಿರುವುದಾಗಿ ಶ್ರೀ ನರೇಶ್ ರವರು ಹಿರಿಯ ಆರೋಗ್ಯ ಪರಿವೀಕ್ಷಕರು ಈ ಸಭೆಯಲ್ಲಿ ತಿಳಿಸಿದ್ದು ಮುಂದಿನ ದಿನಗಳಲ್ಲಿ ಘನತ್ಯಾಜ್ಯ ನಿರ್ವಹಣೆಯಲ್ಲಿ ಯಾವುದೇ ದೂರು ಬಾರದಂತೆ ಕ್ರಮ ಕೈಗೊಳ್ಳಲಾಗುವುದು ತಿಳಿಸಿರುತ್ತಾರೆ.

5. ತೋಟಗಾರಿಕೆ ಇಲಾಖೆ:-

ವಾರ್ಡ್ ವ್ಯಾಪ್ತಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಬೆಂಗಳೂರು ಅಭಿವೃದ್ಧಿ ಪಾಧಿಕಾರಕ್ಕೆ ಸಂಬಂಧಪಟ್ಟ ಉದ್ಯಾನವನಗಳು ಇದ್ದು ಇವುಗಳನ್ನು ಸರ್ಮಕವಾಗಿ ನಿರ್ವಹಣೆ ಮಾಡದೇ ಇರುವುದು ಹಾಗೂ ರಾಯಲ್ ಪಾರ್ಕ್ ಪ್ರದೇಶದಲ್ಲಿ ತೆಂಗಿನ ಮರ ಮತ್ತು ಸಪೋಟ ಮರಗಳು ಇರುವುದರಿಂದ ಸದರಿ ಮರಗಳನ್ನು ಹಾಗೂ ಇವುಗಳಿಂದ ಬರುವ ಫಲಗಳನ್ನು ಅನಾಮಿಕರು ಉಪಯೋಗಿಸುತ್ತಿರುವುದಾಗಿ ಕಂಡುಬಂದಿರುವುದಾಗಿ ಮತ್ತು ಉದ್ಯಾನವನಗಳ ತಂತಿ ಬೇಲಿ ತುಕ್ಕು ಹಿಡಿಯುವ ಹಂತದಲ್ಲಿದ್ದು ಇದಕ್ಕೆ ಬಣ್ಣವನ್ನು ಬಳಿಯಲು ರಾಯಲ್ ಪಾರ್ಕ್‌ನ ವೆಲ್‌ಫೇರ್ ಅಸೋಸಿಯೇಷ್‌ನ ರವರು ಸಭೆಯ ಗಮನಕ್ಕೆ ತಂದಿರುತ್ತಾರೆ. ಆದ್ದಿರಂದ ಸಂಬಂಧಪಟ್ಟ ತೋಟಗಾರಿಕೆ

-3-

Scanned with CamScanner

ಅಧಿಕಾರಿಗಳಿಗೆ ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಮೇಲಾಧಿಕಾರಿಗಳಿಗೆ ತಿಳಿಸಿ ಇದರ ಬಗ್ಗೆ ಕ್ರಮಕೈಗೊಳ್ಳಲು ಎಲ್ಲಾ ಸದಸ್ಯರು ಕೋರಿರುತ್ತಾರೆ. ಆದರೆ ಈ ದಿನದ ಸಭೆಗೆ ಹಾಜರಾದ ಇಲಾಖೆ ಅಧಿಕಾರಿಗಳ ಪ್ರತಿನಿಧಿಗಳು ಮುಂದಿನ ದಿನಗಳಲ್ಲಿ ಉದ್ಯಾನವನಗಳನ್ನು ಸಮರ್ಕವಾಗಿ ನಿರ್ವಹಿಸಲು ಮೇಲಾಧಿಕಾರಿಗಳಲ್ಲಿ ತಿಳಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಈ ಹಿಂದಿನ ಸಭೆಯಲ್ಲಿ ತಿಳಿಸಿರುತ್ತಾರೆ. ಆದರೆ ಈ ದಿನ ಸಭೆಗೂ ಗೈರುಹಾಜರಾಗಿರುತ್ತಾರೆ.

6.ನೋಡಲ್ ಅಧಿಕಾರಿ:-

ವಾರ್ಡ್ ಸಮಿತಿ ಸಭೆಯಲ್ಲಿ ಪಾಲ್ಗೋಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಪ್ರತೀ ಸಭೆಯಲ್ಲೂ ತಿಳಿಸುತ್ತಿದ್ದು ವಾರ್ಡ್ ಸಭೆಯಲ್ಲಿ ಪಾಲ್ಗೋಳ್ಳಲು ಸಂಬಂಧಪಟ್ಟ ಅಧಿಕಾರಿಗಳು ಪ್ರತೀ ಸಭೆಗೆ ಗೈರುಹಾಜರಾಗುತ್ತಿದ್ದು, ಸದರಿ ಗೈರುಹಾಜರಾಗುತ್ತಿರುವ ಅಧಿಕಾರಿಗಳ ವಾರ್ಡ್ ಸಮಿತಿ ಸದಸ್ಯರುಗಳು ಬೇಸರ ವ್ಯಕ್ತಪಡಿಸಿದ್ದು ಸಮಸ್ಯೆಗಳ ಬಗ್ಗೆ ಪರಹಾರ ಕಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ ಹಾಗೂ ಗೈರುಹಾಜರಾಗುತ್ತಿರುವ ಅಧಿಕಾರಿಗಳ ಬಗ್ಗೆ ಸೂಕ್ತ ಕ್ರಮ ಜರುಗಿಸುವಂತೆ ಮೇಲಾಧಿಕಾರಿಗಳಲ್ಲಿ ತಿಳಿಸಲು ವ್ಯಕ್ತ ಪಡಿಸಿರುತ್ತಾರೆ.

ಅದರಂತೆ ವಾರ್ಡ್ ನೋಡಲ್ ಅಧಿಕಾರಿ ಹಾಗೂ ಅಧ್ಯಕರಾದ ಶ್ರೀ ಪ್ರಮೋದ್ ಕುಮಾರ್ ರವರು ಆದ್ಯತೆ ಮೇರೆಗೆ ಸೂಕ್ತ ಕ್ರಮ ಜರುಗಿಸಲಾಗುವುದಾಗಿ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

-ಸಹಿ-
ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.196 ಅಂಜನಾಪುರ

-ಸಹಿ-
ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ.196 ಅಂಜನಾಪುರ

Scanned with CamScanner